ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ಕಾ.ಪಾ.ಅ/ರಮೂಸೌ/ಮ.ಪುರ/ಆ.ಅ/02/24-25

ಕಾರ್ಯಪಾಲಕ ಅಭಿಯಂತರರು,
ರ.ಮೂ.ಸೌ ಮಹದೇವಪುರ ವಿಭಾಗ ಕಛೇರಿ
97/2ಡಿ, 2ನೇ ಮಹಡಿ, ಕೃಷ್ಣಶೈನ್ ಕಟ್ಟಡ
ಮಾರತ್‌ಹಳ್ಳಿ ಸೇತುವೆ ಹತ್ತಿರ, ಬೆಂಗಳೂರು-37
ದಿನಾಂಕ: 18/10/2024

ಆಡಳಿತಾತ್ಮಕ ಅನುಮೋದನೆ

ವಿಷಯ: Additional Grants for Road Widening at Mahadevapura Zone Limits ಕಾಮಗಾರಿಯ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ:1. ಮಾನ್ಯ ಆಯುಕ್ತರರವರ ಅಧಿಕಾರ ಪ್ರತ್ಯಾಯೋಜನೆ ಆದೇಶ ಸಂಖ್ಯೆ: ಬಿ12(1)/ಪಿಆರ್/394/ 2018-19, ದಿನಾಂಕ:04.10.2018.

2. ದಿನಾಂಕ: 26/08/2024ರ ವಾರ್ಡ್ ಮಟ್ಟದ ಲೋಕೋಪಯೋಗಿ ಕಾಮಗಾರಿ, ನಗರ ಯೋಜನೆ ಹಾಗೂ ಮೂಲ ಸೌಕರ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ನಡವಳಿಗಳು ವಿಷಯ ಸಂಖ್ಯೆ:128/2024ರ ಅನುಮೋದನೆ.

****

ಪ್ರಸ್ತಾವನೆ: 2023-24ನೇ ಸಾಲಿನ ಪಾಲಿಕೆ ಆಯವ್ಯಯ ಸಂಕೇತ 05-400401-01ರ ಅಡಿಯಲ್ಲಿ ಮಾನ್ಯ ಉಪ-ಮುಖ್ಯಮಂತ್ರಿಗಳು ಕರ್ನಾಟಕ ಸರ್ಕಾರ ರವರ ಪರಿಕಲ್ಪನೆಯಂತೆ "ಬ್ರಾಂಡ್ ಬೆಂಗಳೂರು" ಯೋಜನೆ ಅಡಿಯಲ್ಲಿ ಕೈಗೊಳ್ಳಲಾಗುವ 8 ವಿವಿಧ ಶೀರ್ಷಿಕೆಗಳ ಅಡಿಯಲ್ಲಿ ಬ್ರಾಂಡ್ ಬೆಂಗಳೂರು-ಸುಗಮ ಸಂಚಾರ ಬೆಂಗಳೂರು ಅಡಿಯಲ್ಲಿ ವಾಹನ ದಟ್ಟಣೆಯನ್ನು ಕಡಿಮೆಗೊಳಿಸುವ ಸಲುವಾಗಿ ರೂಪಿಸಲಾಗಿರುವ ಯೋಜನೆಗಳ ಕ್ರಮಸಂಖ್ಯೆ (4)ರಲ್ಲಿ ಆರ್.ಎಂ.ಪಿ-2015 ರಸ್ತೆಗಳ ನಿರ್ಮಾಣಕ್ಕೆ ರೂ. 50.00 ಕೋಟಿಗಳ ಅನುದಾನವನ್ನು ಮೀಸಲಿರಿಸಿದ್ದು, ಸದರಿ ಮೊತ್ತದಲ್ಲಿ ರಸ್ತೆ ಅಗಲೀಕರಣಕ್ಕೆ ಪೂರ್ವಭಾವಿಯಾಗಿ ಮಾಡಬೇಕಾದ ರಸ್ತೆ ಅಗಲ ಗುರುತಿಸುವಿಕೆ, ರಸ್ತೆ ಇಕ್ಕೆಲಗಳಲ್ಲಿ ಇರುವ ಕಟ್ಟಡಗಳ ತೆರವು ಕಾರ್ಯಾಚರಣೆ, ಭಗ್ನಾವಶೇಷಗಳ ಸಾಗಾಣಿಕೆ ಮತ್ತು ಪ್ರಸ್ತುತ ಇರುವ ರಸ್ತೆಗೆ ಮರು ಡಾಂಬರೀಕರಣ ಮಾಡಲು ಉದ್ದೇಶಿಸಲಾಗಿರುವ ಕಾಮಗಾರಿಗಳ ಪೈಕಿ ರಸ್ತೆ ಮೂಲಭೂತ ಸೌಕರ್ಯ ಮಹದೇವಪುರ ವಿಭಾಗ ವ್ಯಾಪ್ತಿಯಲ್ಲಿ ಪ್ರಸ್ತಾಪಿತ Additional Grants for Road Widening at Mahadevapura Zone Limits ಕಾಮಗಾರಿಗೆ ರೂ. 500.00 ಲಕ್ಷಗಳ ಅನುದಾನವನ್ನು ಅನುಮೋದಿತ ಕ್ರಿಯಾ ಯೋಜನೆಯ ಕ್ರಮಸಂಖ್ಯೆ(8)ರಲ್ಲಿ ಒದಗಿಸಲಾಗಿರುತ್ತದೆ.

....2

ಅದರಂತೆ ಸದರಿ ಪ್ರಸ್ತಾಪಿತ ಕಾಮಗಾರಿಗೆ ವಾರ್ಡ್ ಮಟ್ಟದ ಲೋಕೋಪಯೋಗಿ ಕಾಮಗಾರಿ, ನಗರ ಯೋಜನೆ ಹಾಗೂ ಮೂಲ ಸೌಕರ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ನಡವಳಿಗಳು ವಿಷಯ ಸಂಖ್ಯೆ:128/2024ರಂತೆ ಅನುಮೋದನೆ ನೀಡಲಾಗಿರುತ್ತದೆ.

ಪ್ರಸ್ತಾಪಿತ Additional Grants for Road Widening at Mahadevapura Zone Limits ಕಾಮಗಾರಿಗೆ ಉಲ್ಲೇಖ (2)ರ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುವ ಹಿನ್ನೆಲೆ ಮತ್ತು ಉಲ್ಲೇಖ (1)ರ ಅಧಿಕಾರ ಪ್ರತ್ಯಾಯೋಜನೆಯಂತೆ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಆದೇಶ ಕೋರಿರುವ ಹಿನ್ನೆಲೆಯಲ್ಲಿ ಮೇಲ್ಕಂಡ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶವನ್ನು ನೀಡಲಾಗಿದೆ.

ಆಡಳಿತಾತ್ಮಕ ಅನುಮೋದನೆ ಆದೇಶ ಪ್ರತಿ

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ,"Additional Grants for Road Widening at Mahadevapura Zone Limits." ಕಾಮಗಾರಿಯ ಅಂದಾಜು ಪಟ್ಟಿಯ ಮೊತ್ತ **ರೂ.500.00ಲಕ್ಷಗಳಿಗೆ (ರೂಪಾಯಿ ಐದುನೂರು ಲಕ್ಷಗಳು ಮಾತ್ರ)** ಉಲ್ಲೇಖ (1)ರ ಅಧಿಕಾರ ಪ್ರತ್ಯಾಯೋಜನೆಯಂತೆ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಆದೇಶ ಪ್ರತಿ ಹೊರಡಿಸಲಾಗಿದೆ.

ಆಡಳಿತಾತ್ಮಕ ಅನುಮೋದನೆ ಆದೇಶ ಪ್ರತಿಯನ್ನು ಈ ಕಛೇರಿಯ ಆಡಳಿತಾತ್ಮಕ ಆದೇಶ ಪ್ರತಿ ದಾಖಲಾತಿ ವಹಿಯ ಸಂಖ್ಯೆ:**EE(RI-MPura)/ADM/AS/02/2024-25**.ದಿನಾಂಕ:**18/10/2024**ರಂತೆ ನೊಂದಾಯಿಸಲಾಗಿದೆ.

ಕಾರ್ಯಪಾಲಕ ಅಭಿಯಂತರರು, 18/10
ರಮೂಸೌ ಮಹದೇವಪುರ ವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:

1. ಪ್ರಧಾನ ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಅವಗಾಹನೆಗೆ ತರಲು ತಾಂತ್ರಿಕ ಸಹಾಯಕರು ರವರಿಗೆ ಸೂಕ್ತ ಕ್ರಮಕ್ಕಾಗಿ.
2. ಮುಖ್ಯ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ ರವರ ಅವಗಾಹನೆಗಾಗಿ ಸಲ್ಲಿಸಿದೆ.
3. ಅಧೀಕ್ಷಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ ರವರ ಅವಗಾಹನೆಗಾಗಿ ಸಲ್ಲಿಸಿದೆ.
4. ಲೆಕ್ಕಾಧೀಕ್ಷಕರು, ರಮೂಸೌ–ಮಹದೇವಪುರ ರವರ ಮುಂದಿನ ಕ್ರಮಕ್ಕಾಗಿ.
5. ಕಛೇರಿ ಕಡತಕ್ಕೆ.